ಮಲೇರಿಯಾ ರೋಗ ನಿಯಂತ್ರಣ

503 (5993) ಶ್ರೀ ಗಡ್ಡದೇವರಮಠ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ)– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಶಿರಹಟ್ಟಿ ತಾಲ್ಲೂಕಿನ ವರವಿ ಗ್ರಾಮದಲ್ಲಿ ಇತ್ತೀಚೆಗೆ 5–6 ಜನರಿಗೆ ಮಲೇರಿಯಾ ಬೇನೆ ತಗುಲಿ ಆಸ್ಪತ್ರೆಗೆ ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

2. ಹಾಗಿದ್ದಲ್ಲಿ ಮಲೇರಿಯಾ ನಿಯಂತ್ರಣಕ್ಕೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು.

3. ವರವಿ ಗ್ರಾಮದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1. ಬಂದಿದೆ

2. ವರವಿ ಗ್ರಾಮದಲ್ಲಿ ಮಲೇರಿಯಾ ನಿಯಂತ್ರಣಕ್ಕಾಗಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.

1. ಎಲ್ಲಾ ಜ್ವರ ಪೀಡಿತರಿಗೆ ಶೀಘ್ರ ಪತ್ತೆ ಮತ್ತು ತ್ವರಿತ ಚಿಕಿತ್ಸೆ ಸೇವೆ ಲಭ್ಯವಾಗುವಂತೆ ವ್ಯವಸ್ಥೆ ಮಾಡಲಾಗಿದ್ದು, ಇದಕ್ಕಾಗಿ ಶಿರಹಟ್ಟಿ ತಾಲ್ಲೂಕಿಗೆ 1000 ರ್ಯಾಪಿಡ್ ಡೈಯಗ್ನೋಸ್ಟಿಕ್ ಕಿಟ್ಸ್ 2500ವಿಶೇಷ ಬ್ಲಿಸ್ಟರ್ ಪ್ಯಾಕ್ ಗುಳಿಗೆಗಳು ಮತ್ತು ಆತಂಕಕಾರಿ ಪ್ರಮಾಣದ ರೋಗದ ಚಿಕಿತ್ಸೆಗಾಗಿ 90 ಆಂಪ್ಯೂಲ್‌ಗಳ ಜೀವ ರಕ್ಷಕ ಈ–ಮಾಲ್ ಚುಚ್ಚುಮದ್ದನ್ನು ಸರಬರಾಜು ಮಾಡಲಾಗಿದೆ.

2. ವರವಿ ಗ್ರಾಮಸ್ಥರಿಗೆ ಸೂಕ್ತ ಆರೋಗ್ಯ ತಪಾಸಣೆಗಾಗಿ ತಾತ್ಕಲಿಕ ಚಿಕಿತ್ಸಾಲಯವನ್ನು ಸ್ಥಾಪಿಸಲಾಗಿದ್ದು, ಒಬ್ಬ ವೈದ್ಯರನ್ನು ಸಹ ನಿಯೋಜಿಸಿದೆ.

3. ರಕ್ತ ಲೇಪನ ತಕ್ಷಣದ ಪರೀಕ್ಷೇಗಾಗಿ ಕ್ಷೇತ್ರ ಪ್ರಯೋಗ ಶಾಲೆಯನ್ನು ಗ್ರಾಮದಲ್ಲಿ ಸ್ಥಾಪಿಸಲಾಗಿದೆ.

4. ವರವಿ ಗ್ರಾಮ ಹಾಗೂ ಹೊಸದಾಗಿ ನಿರ್ಮಿಸಲಾದ ಮುನೇಶ್ವರ ಸ್ವಾಮಿ ಮಠದಲ್ಲಿಯೂ ಸಹ ವಿಶೇಷ ಸುತ್ತಿನ ಡಿ.ಡಿ.ಟಿ ಸಿಂಪಡಣಾ ಕಾರ್ಯವನ್ನು ರೋಗವಾಹಕ ಸೊಳ್ಳೆಗಳ ನಿಯಂತ್ರಣಕ್ಕಾಗಿ ಕೈಗೊಳ್ಳಲಾಗಿದೆ.

5. ಗದಗ ಜಿಲ್ಲೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯಮ ಬೆಂಗಳೂರು ಇಲ್ಲಿಂದ ಕೀಟ ಶಾಸ್ತ್ರಜ್ಞರು ವರವಿ ಗ್ರಾಮದಲ್ಲಿ ಅಧ್ಯಯನ ನಡೆಸಿ ಇಲ್ಲಿಯ ನೀರು ಶೇಖರಣೆಗಳಲ್ಲಿ ಲಾರ್ವಾಹಾರಿ ಮೀನುಗಳನ್ನು ಬಿಟ್ಟಿದ್ದು, ಸೊಳ್ಳೆಗಳ ಉತ್ಪತ್ತಿ ತಡೆಯಲು ಕ್ರಮ ಕೈಗೊಳ್ಳಲಾಗಿದೆ.

6. ಜಿಲ್ಲಾ ಮಲೇರಿಯಾ ಅಧಿಕಾರಿಗಳು, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಹಾಗೂ ಬೆಂಗಳೂರಿನ ನಿರ್ದೇಶನಾಲಯದಿಂದ ಉಪ ನಿರ್ದೇಶಕರು ಸ್ವತಃ ವರವಿ ಗ್ರಾಮಕ್ಕೆ ಭೇಟಿ ನೀಡಿ ಇಲ್ಲಿನ ನಿಯಂತ್ರಣ ಕಾರ್ಯಗಳನ್ನು ಪರಿಶೀಲಿಸ ಸೂಕ್ತ ಮಾರ್ಗದರ್ಶನವನ್ನು ನೀಡಿ ಅದರಂತೆ ಕ್ರಮ ಕೈಗೊಳ್ಳಲು ವ್ಯವಸ್ಥೆ ಮಾಡಿರುತ್ತಾರೆ.

7. ಗ್ರಾಮದ ಜನತೆಗೆ ಹಾಗೂ ಮುನೇಶ್ವರ ಸ್ವಾಮಿ ದೇವಸ್ಥಾನಕ್ಕೆ ಬರುವ ಯಾತ್ರಾರ್ಥಿಗಳಿಗೆ ಸ್ವಯಂ ರಕ್ಷಣಾ ವಿಧಾನಗಳನ್ನು ಅನುಸರಿಸಿ, ಸೊಳ್ಳೆ ಕಡಿತದಿಂದ ರಕ್ಷಣೆ ಪಡೆಯುವಂತೆ ಆರೋಗ್ಯ ಶಿಕ್ಷಣ ನೀಡಲಾಗುತ್ತಿದೆ.

III. ಶಿರಹಟ್ಟಿ ತಾಳ್ಲೂಕಿನ ಜನಸಂಖ್ಯೆ 133511 ಇದ್ದು. 4 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಬೇಕಾಗಿರುತ್ತದೆ. ಆದರೆ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಮಾರ್ಗ ಸೂಚಿ ಪ್ರಕಾರ ಹೆಚ್ಚಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಅವಕಾಶವಿರುವುದಿಲ್ಲ.

ಆದರೆ, ವರವಿ ಗ್ರಾಮದಲ್ಲಿ ಒಂದು ಉಪಕೇಂದ್ರವನ್ನು ಸ್ಥಾಪಿಸಲು ಈಗಾಗಲೇ ಜಿಲ್ಲಾ ಆಡಳಿತವು ಕ್ರಮಕೈಗೊಂಡಿರುತ್ತದೆ.

ಭೂಮಿ ದಾನ ಮಾಡಿದವರ ಮಗನಿಗೆ ಉದ್ಯೋಗ ಒದಗಿಸುವುದು.

504 (6003) ಶ್ರೀ ಪ್ರಕಾಶ್ ಹೆಚ್.ಎಸ್. (ಹಾಸನ):– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಆರೋಗ್ಯ ಇಲಾಖೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣಕ್ಕಾಗಿ ಭೂಮಿಯನ್ನು ದಾನ ಮಾಡಿದವರ ಸಂಬಂಧಿಕರಿಗೆ ಉದ್ಯೋಗ ಒದಗಿಸಲು ಸರ್ಕಾರದಲ್ಲಿರುವ ನಿಯಮಗಳೇನು?

2. ಶಿರಾ ತಾಲ್ಲೂಕು ದೊಡ್ಡದುಲಿಕುಂಟೆ ಗ್ರಾಮದ ಶ್ರೀ ಸೀತರಾಮಯ್ಯ ಅವರು ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣಕ್ಕಾಗಿ ಊರಿಗೆ ಹೊಂದಿಕೊಂಡಿರುವ ಒಂದು ಎಕರೆ 2 ಗುಂಟೆ ಜಮೀನು ಬಂದಿದೆಯೇ?

3. ಜಮೀನು ದಾನ ಪಡೆಯುವಾಗ ಅವರ ಮಗನಿಗೆ ಅದೇ ಆರೋಗ್ಯ ಕೇಂದ್ರದಲ್ಲಿ ಉದ್ಯೋಗ ಕೊಡಿಸುವುದಾಗಿ ಭರವಸೆ ನೀಡಿರುವುದು ನಿಜವಲ್ಲವೇ;

4. ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಾರಂಭಗೊಂಡಿದ್ದರೂ ಜಮೀನು ಒದಗಿಸಿದ ಶ್ರೀ ಸೀತಾರಾಮಯ್ಯನವರ ಮಗನಿಗೆ ಉದ್ಯೋಗ ಒದಗಿಸದಿರುವುದು ಸರ್ಕಾರದ ಗಮನಕ್ಕೆ ಗುಂಟೆ ಜಿಮೀನು ಬಂದಿದೆಯೇ;

5. ಆರ್ಥಿಕವಾಗಿ ಹಿಂದುಳಿದ ಬಡ ಕುಟುಂಬದವರಿಗೆ ಸಹಾಯ ಮಾಡಲು ಉದ್ಯೋಗ ಒದಗಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1. ಭೂಮಿಯನ್ನು ದಾನ ಮಾಡಿದವರ ಸಂಬಂಧಿಕರಿಗೆ ಉದ್ಯೋಗ ಒದಗಿಸುವ ನಿಯಮ ಸರ್ಕಾರದಲ್ಲಿರುವುದಿಲ್ಲ.
2. ಹೌದು.
3. ಭರವಸೆ ನೀಡಿರುವುದಿಲ್ಲ.
4. ಅನ್ವಯಿಸುವುದಿಲ್ಲ
5. ಅನ್ವಯಿಸುವುದಿಲ್ಲ.

ಸರ್ಕಾರಿ ಆಯುರ್ವೇದ ಔಷಧಾಲಯಗಳಿಗೆ ನೀಡುವ ಔಷಧಿಗಳ ಪ್ರಮಾಣ

505 (5731) ಶ್ರೀ ಸೋಮಣ್ಣ ವಿ. (ಬಿನ್ನಿಪೇಟೆ):– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1) 2004–05ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಆಯುರ್ವೇದ ಔಷದಾಲಯ ಹಾಗೂ ಆಸ್ಪತ್ರೆಗಳಿಗೆ ನೀಡಿದ ಔಷಧಿಗಳ ಪ್ರಮಾಣವೆಷ್ಟು;

2) ಈ ಎಲ್ಲಾ ಸರ್ಕಾರಿ ಆಯುರ್ವೇದ ಔಷಧಾಲಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಔಷಧಗಳನ್ನು ಒದಗಿಸುವ ಬೇಡಿಕೆ ಇದೆಯೇ;

3) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) 2004–05ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಔಷಧಾಲಯ ಮತ್ತು ಆಸ್ಪತ್ರೆಗಳಿಗೆ ನೀಡಲಾದ ಔಷಧಗಳ ಪ್ರಮಾಣ ಈ ಕೆಳಕಂಡಂತಿರುತ್ತದೆ.

ರಾಜ್ಯ ವಲಯ ಹಾಗೂ ಜಿಲ್ಲಾ ವಲಯ	–ರೂ: 276.29 ಲಕ್ಷಗಳು.
ಕೇಂದ್ರ ಪುರಸ್ಕೃತ ಯೋಜನೆಯಡಿ:	ರೂ: 122.75 ಲಕ್ಷಗಳು.
ಪಿ ಎಂ ಜಿ ವೈ ಅಡಿ :	ರೂ 26.00 ಲಕ್ಷಗಳು.
ಒಟ್ಟು:	**ರೂ 425.04 ಲಕ್ಷಗಳು**